ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕು ಬುಕ್ಕಾ ಪಟ್ಟಣ ಹೋಬಳಿ ಅಜ್ಜೇನಹಳ್ಳಿಯಲ್ಲಿ ಹಟ್ಟಿ ಚಿನ್ನದ ಗಣಿಯವರು ಚಿನ್ನ ಸಂಸ್ಕರಣ ಸ್ಥಾವರ ಸ್ಥಾಪನೆಯ ಉದ್ದೇಶ ಹೊಂದಿದ್ದಾರೆಯೇ

ಆ) ಹಾಗಿದ್ದಲ್ಲಿ ಸದರಿ ಯೋಜನೆಯ ಅಂದಾಜು ವೆಚ್ಚ ಎಷ್ಟು ಹಾಗೂ ಯೋಜನೆಯನ್ನು ಎಂದಿನಿಂದ ಕೈಗೆತ್ತಿಕೊಳ್ಳಲಾಗುವದು?

ಶ್ರೀ ಎ. ಬಿ. ಪಾಟೀಲ್ (ಗಣಿ ಮತ್ತು ಭೂವಿಜ್ಞಾನ ಸಚಿವರು):

ಅ) ಹೌದು ಆರ್ಥಿಕ ಅಡಚಣೆಯಿಂದಾಗಿ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕು ಬುಕ್ಕಾಪಟ್ಟಣ ಹೋಬಳಿ, ಅಜ್ಜೇನಹಳ್ಳಿಯಲ್ಲಿ ಚಿನ್ನ ಸಂಸ್ಕರಣಾ ಸ್ಥಾವರ ಸ್ಥಾಪನೆಯನ್ನು ಮುಂದೂಡಲಾಗಿದೆ.

ಆ) ಅಜ್ಜೇನಹಳ್ಳಿಯ ಚಿನ್ನದ ಅದಿರಿನಲ್ಲಿ ಜಿನ್ನದ ಅಂಶವು ಕೇವಲ 1.5ರಿಂದ 2.0 ಗ್ರಾಂ ಇದ್ದು, ಸಾಮಾನ್ಯ ರೀತಿಯಲ್ಲಿ ಪುಡಿಮಾಡಿ ಚಿನ್ನ ಸಂಸ್ಕರಿಸುವ ಪದ್ಧತಿಯಿಂದ ವೆಚ್ಚವು ಅಧಿಕವಾಗಿ ನಷ್ಟಕ್ಕೆ ಒಳಗಾಗುತ್ತದೆ ಆದ್ದರಿಂದ 'ಹೀಪ್ ಲೀಚಿಂಗ್' ಎಂಬ ಕಡಿಮೆ ವೆಚ್ಚದ ಪದ್ಧತಿಯನ್ನು ಪ್ರಯೋಗಾತ್ಮಕವಾಗಿ ಪರಿಶೀಲಿಸಲಾಗುತ್ತಿದೆ. ಈ ಯೋಜನಾ ವೆಚ್ಚವು ರೂ.60ಲಕ್ಷಗಳಾಗಿದ್ದು, ಯೋಜನೆಯ ಕೆಲಸವು ಪ್ರಗತಿಯಲ್ಲಿದೆ.

ಶಿರಾ ಹಾಗೂ ಕಳ್ಳಂಬೆಳ್ಳಗಳಿಗೆ ನೀರಾವರಿ ಇಲಾಖೆಯಿಂದ ನೀರು ಸರಬರಾಜು

1098 (1640)

ಶ್ರೀ.ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ನಗರಾಭಿವೃದ್ಧಿ ಸಚಿವರು

ಈ ಕೆಳಕಂಡಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ನೀರಾವರಿ ಇಲಾಖೆಯವರು ಕಳ್ಳಂಬೆಳ್ಳ ಮತ್ತು ಸುತ್ತುಮುತ್ತಲಿನ ಗ್ರಾಮಗಳಿಗೆ ಹಾಗೂ ಶಿರಾ ಪಟ್ಟಣಕ್ಕೆ ಎಸ್ಕೇಪ್ ನಾಲೆಯ ಮುಖೇನ ನೀರು ಸರಬರಾಜು ಮಾಡಲು ಒಪ್ಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ ಎಸ್ಕೇಪ್ ಚಾನಲ್ ನಿರ್ಮಾಣ ಹಾಗೂ ಮತ್ತಿತರ ಕಾಮಗಾರಿಗಳ ಅಂದಾಜು ವೆಚ್ಚ ಎಷ್ಟು?

ಶ್ರೀ ಎಂ. ಎಸ್.ಪಾಟಿಲ್ (ನಗರಾಭಿವೃದ್ಧಿ ಇಲಾಖೆ):

1. ಹೌದು

2. ಪ್ರಿಲಿಮಿನರಿ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು ಅಂದಾಜು ಮೊತ್ತವು ರೂ.1186.00 ಲಕ್ಷಗಳು ಇರುತ್ತದೆ. ಸರ್ವೇಕ್ಷಣೆ ಹಾಗೂ ತನಿಖಾ ಕಾರ್ಯವನ್ನು ನಡೆಸಿ ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಬೇಕಾಗಿದೆ.